

ಸುರತ್ಕಲ್‌ನ ಎನ್‌ಐಟಿಕೆ ಪ್ರಾಂಗಣದಲ್ಲಿ ನಿರ್ಮಿಸಿರುವ ಸಿಆರ್‌ಎಸ್ ಕಟ್ಟಡವನ್ನು ಧರ್ಮೇಂದ್ರ ಪ್ರಧಾನ್ ಅವರು ಶನಿವಾರ ಉದ್ಘಾಟಿಸಿದರು. ಶಾಸಕ ವೈ.ಭರತ್ ಶೆಟ್ಟಿ, ಎನ್‌ಐಟಿಕೆ ನಿರ್ದೇಶಕ (ಹೆಚ್ಚುವರಿ) ಪ್ರೊ.ಪ್ರಸಾದ್ ಕೃಷ್ಣ, ಸಂಸದ ನಳಿನ್ ಕುಮಾರ್ ಕಟೀಲ್, ಪ್ರೊ.ಉದಯ್ ಕುಮಾರ್ ಆರ್.ಯರಗಟ್ಟಿ ಹಾಗೂ ಇತರರು ಇದ್ದಾರೆ



ಸುರತ್ಕಲ್ ಎನ್‌ಐಟಿಕೆಯ ಘಟಿಕೋತ್ಸವ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

### 20ನೇ ವಾರ್ಷಿಕ ಘಟಿಕೋತ್ಸವದಲ್ಲಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್

# ‘ಸುಸ್ಥಿರ ಇಂಧನ ದೀವಿಗೆಯಾಗಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಸುಸ್ಥಿರ ಇಂಧನ ಕ್ಷೇತ್ರದ ಸಮಗ್ರ ಸುಧಾರಣೆಗಳಿಗೆ ಸುರತ್ಕಲ್‌ನ ಎನ್‌ಐಟಿಕೆಯು ದೀವಿಗೆಯಾಗಲಿ. ದೇಶದ ಹಸಿರು ಇಂಧನ ಗುರಿ ಸಾಧನೆಗೆ ಈ ಸಂಸ್ಥೆಯು ಚಾಲಕ ಶಕ್ತಿಯಾಗಿ ಹೊರಹೊಮ್ಮಲಿ’ ಎಂದು ಕೇಂದ್ರ ಶಿಕ್ಷಣ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

ಎನ್‌ಐಟಿಕೆಯಲ್ಲಿ ಶನಿವಾರ 20ನೇ ವಾರ್ಷಿಕ ಘಟಿಕೋತ್ಸವ ಭಾಷಣ ಮಾಡಿದ ಅವರು, ಸಂಸ್ಥೆಯಲ್ಲಿ ಸುಸ್ಥಿರ ಇಂಧನಕ್ಕೆ ಸಂಬಂಧಿಸಿ ಪೂರ್ಣಪ್ರಮಾಣದ ವಿಭಾಗವನ್ನು ಸ್ಥಾಪಿಸುವಂತೆ ಸಲಹೆ ನೀಡಿದರು.

ಜೈವಿಕ ಕಸದಿಂದ ಅನಿಲ ಉತ್ಪಾದಿಸುವ 500 ಟನ್ ಸಾಮರ್ಥ್ಯದ ಘಟಕ ಹಾಗೂ ಇ-ಬೈಸಿಕಲ್‌ಗಳಿಗಾಗಿ ಸೌರಶಕ್ತಿ ಚಾಲಿತ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸುವ ಮೂಲಕ ಸುಸ್ಥಿರ ಇಂಧನ ಬಳಕೆಗೆ ಉತ್ತೇಜನ ನೀಡಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ‘ಹೈಡ್ರೋಜನ್ ಭವಿಷ್ಯದ ಸುಸ್ಥಿರ ಇಂಧನ. ಇದಕ್ಕೆ ಬೇಡಿಕೆಯೂ ಹೆಚ್ಚಲಿದೆ. ಇದರ ಉತ್ಪಾದನೆಯ ತಂತ್ರಜ್ಞಾನಗಳನ್ನು ಸುಧಾರಿಸುವತ್ತಲೂ ಸಂಸ್ಥೆ ಗಮನ ಹರಿಸಬೇಕು’ ಎಂದರು.

ಕಂಪ್ಯುಟೇಷನಲ್ ಮತ್ತು ಡೇಟಾ ಸೈನ್ಸ್‌ನಲ್ಲಿ ಬಿ-ಟೆಕ್ ಕೋರ್ಸ್‌ಗಳನ್ನು 2022-23ನೇ ಸಾಲಿನಲ್ಲಿ ಆರಂಭಿಸುವುದಾಗಿ ಸಂಸ್ಥೆಯ ನಿರ್ದೇಶಕ (ಹೆಚ್ಚುವರಿ) ಪ್ರೊ. ಪ್ರಸಾದ್ ಕೃಷ್ಣ ತಿಳಿಸಿದರು.

‘2021-22ನೇ ಸಾಲಿನಲ್ಲಿ 405 ಕಂಪನಿಗಳು ಕ್ಯಾಂಪಸ್ ಸಂದರ್ಶನಕ್ಕೆ ಹೆಸರು ನೊಂದಾಯಿಸಿದ್ದವು. ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ ಶೇ 73 ರಷ್ಟು ಉದ್ಯೋಗ ಪಡೆದಿದ್ದಾರೆ. ವಿದ್ಯಾರ್ಥಿಗಳಿಗೆ ವರ್ಷಕ್ಕೆ ಸರಾಸರಿ ₹ 15.84 ಲಕ್ಷದಷ್ಟು ಪ್ಯಾಕೇಜ್ ಸಿಕ್ಕಿದೆ. ಕೆಲ ವಿದ್ಯಾರ್ಥಿಗಳು ವರ್ಷಕ್ಕೆ ಗರಿಷ್ಠ ₹ 43 ಲಕ್ಷದಷ್ಟು ಪ್ಯಾಕೇಜ್ ಕೂಡಾ ಪಡೆದಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

ಬಿ.ಟೆಕ್ ಪದವಿಧರರಲ್ಲಿ ಒಂಬತ್ತು ಮಂದಿಗೆ ಹಾಗೂ ಸ್ನಾತಕೋತ್ತರ ಪದವೀಧರರಲ್ಲಿ 30 ಮಂದಿಗೆ ಘಟಿಕೋತ್ಸವದಲ್ಲಿ ಸಂಸ್ಥೆಯ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ಸೋನಾ ಉದ್ಯಮಗಳ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಕೆ.ಯಜ್ಞನಾರಾಯಣ ಹಾಗೂ ಟೆಕ್ನಿಮಾಂಟ್ ಕಂಪನಿಯ ಭಾರತ ಪ್ರದೇಶದ ಉಪಾಧ್ಯಕ್ಷ ಮಿಲಿಂದ್ ಬರಿಡೆ ಅತಿಥಿಗಳಾಗಿದ್ದರು. ಇವರಿಬ್ಬರೂ ಸಂಸ್ಥೆಯ ಹಳೆ ವಿದ್ಯಾರ್ಥಿಗಳು.

## ಸಿಆರ್‌ಎಫ್ ಉದ್ಘಾಟನೆ

ಎನ್‌ಐಟಿಕೆ ಪ್ರಾಂಗಣದಲ್ಲಿ ಸ್ಥಾಪಿಸಿರುವ ಕೇಂದ್ರೀಯ ಸಂಶೋಧನಾ ಸೌಲಭ್ಯ (ಸಿಆರ್‌ಎಫ್) ಹಾಗೂ ಅಂತರಶಿಕ್ಷಣ ಅಧ್ಯಯನ ಕೇಂದ್ರವನ್ನು ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಿದರು. ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಹಣಕಾಸು ಸಂಸ್ಥೆಯ ನೆರವಿನಿಂದ ನಿರ್ಮಿಸಲಾದ ಈ ಕಟ್ಟಡವು 10,394 ವಿಸ್ತೀರ್ಣವನ್ನು ಹೊಂದಿದೆ. ಇದರ ನಿರ್ಮಾಣಕ್ಕೆ ₹ 48 ಕೋಟಿ ವೆಚ್ಚವಾಗಿದೆ. ₹ 54.76 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವ 11,246 ಚ.ಮೀ. ವಿಸ್ತೀರ್ಣದ ಉಪನ್ಯಾಸ, ಸಭಾಂಗಣ ಸಂಕೀರ್ಣದ ಕಟ್ಟಡಕ್ಕೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

Prajavani, Date: 16/10/22. p, no - 02